

ಮಾವು ಇದೆ. ಇದು ಹೇಗೆ ಕಾಣಿಸುತ್ತದೆಂದರೆ ಭೂಮಿಯ ಬಿಳಿಯ ಸ್ತನಾಗ್ರದ ಕಪ್ಪಿನಂತಿದೆ ಎಂದು ಯಕ್ಷನೊಬ್ಬನು ಮೇಘನಿಗೆ ವರ್ಣಿಸುವ ಉಲ್ಲೇಖವಿದೆ.

ಋತು ಸಂಹಾರದಲ್ಲಿ 'ಮಾವಿನೆಳೆ ಚಿಗುರ ರಸ ಕುಡಿದು ಮತ್ತೇರಿದ ಕೋಗಿಲೆ ತನ್ನ ಸಂಗಾತಿಯನ್ನು ಚುಂಬಿಸುತ್ತಿದೆ' ಎನ್ನುತ್ತಾನೆ. ಮತ್ತೊಂದು ಕಡೆ 'ಹೊಂಬಣ್ಣದ ಚಿಗುರು ಧರಿಸಿ ತಲೆ ಬಾಗಿ ಹೂ ಹೊತ್ತು ನಿಂತ ಮಾಮರಗಳೀಗ ತಂಗಾಳಿಯಲ್ಲಿ ತಲೆದೂಗಿ ಭುಗಿಲೆದ್ದ ಹಂಬಲದ ತರುಣಿಯರು ತಲ್ಲಣಿಸುತಿಹರು' ಎನ್ನುತ್ತಾನೆ. ನಮ್ಮಲ್ಲಿ ಮಾವಿನ ನೈಜ ಸೊಗಡನ್ನು ಆಸ್ವಾದಿಸಿ, ಅದರೊಳಗೆ ಮುಳುಗಿ ಸಂಭ್ರಮಿಸಿ ಬರೆದ ಏಕೈಕ ಕವಿ ಕಾಳಿದಾಸ ಮಾತ್ರ. ಪ್ರೇಮ ಮತ್ತು ಕಾಮಗಳ ಮಹಾಸಂಗಮದಂತೆ ಮಾವನ್ನು ಚಿತ್ರಿಸುತ್ತಾನೆ. ಬದುಕಿನ ಅನೇಕ ಚಲನೆಗಳನ್ನು ವಿಷಾದ, ವಿರಾಗ ಮತ್ತು ಶೃಂಗಾರವನ್ನು ಹಿಡಿದು ದಾಖಲಿಸಲು ಪ್ರಯತ್ನಿಸಿದ್ದಾನೆ. ಬಹುಶಃ ಕಾಳಿದಾಸನನ್ನು ಕಾಪಿ ಮಾಡಿದ ಕನ್ನಡದ ಕವಿಗಳು ವಸಂತದಲ್ಲಿ ಮಾವು ಚಿಗುರಿ ಹೂ ಬಿಡುತ್ತದೆಂದು ಬರೆದು ಬಿಟ್ಟರೊ ಏನೊ. ಗಂಗೆಯ, ಯಮುನೆಯ ಬಯಲುಗಳಲ್ಲಿ ಮಾವು ಹೂ ಬಿಡುವ ದಿನಗಳು ಯಾವವು? ಎಂದು ತುಸು ನೋಡಬೇಕು.

ಚಾರಿತ್ರಿಕ ಮಾಹಿತಿಗಳ ಪ್ರಕಾರ, ಬುದ್ಧ ಲುಂಬಿಣಿಯ ಮಾವಿನ ವನದಲ್ಲಿ ಹುಟ್ಟಿದನೆಂಬ ಮಾಹಿತಿ ಇದೆ. ಬುದ್ಧ ಆಮ್ರವನಗಳಲ್ಲೆ ತಂಗುತ್ತಿದ್ದನೆಂಬ ಉಲ್ಲೇಖಗಳು ಬರುತ್ತವೆ. ಬುದ್ಧ ಮಹಾ ಜೀವನ ಪ್ರೇಮಿ, ಸೌಂದರ್ಯೋಪಾಸಕನಾಗಿದ್ದರ ಕುರಿತು ಪ್ರಸ್ತಾಪಗಳಿವೆ. ಆದರೆ ಆಮ್ರಪಾಲಿಯರ ಮೋಹಕ್ಕೆ ಸಿಗದೆ ದೂರವಿರಬೇಕೆಂದು ಬೌದ್ಧ ಪಿಟಕಗಳು ಹೇಳುತ್ತವೆ. ಅವರಿಗೆ ಆಮ್ರದ ಬಗ್ಗೆ ತುಸು ಅಬ್ಸೆಸ್ ಎನ್ನುವ ಪ್ರೀತಿ ಇದೆ. ಬೌದ್ಧ ಭಿಕ್ಕುಗಳು, ವ್ಯಾಪಾರಿಗಳು ಮಾವನ್ನು ಬೇರೆ ಬೇರೆ ಭೂ ಭಾಗಗಳಿಗೆ ತೆಗೆದುಕೊಂಡು ಹೋದದ್ದರ ಬಗ್ಗೆ ಉಲ್ಲೇಖಗಳಿವೆ. ಒಂದರ್ಥದಲ್ಲಿ ಮಾವನ್ನು ಪ್ರಸಿದ್ಧಗೊಳಿಸಿದವರಲ್ಲಿ ಬೌದ್ಧರೆ ಮೊದಲಿಗರಿರಬಹುದು. ಬುದ್ಧ ಹೆಚ್ಚಾಗಿ ಪ್ರವಚನಗಳನ್ನು ಮಾಡುತ್ತಿದ್ದುದು ಮಾವಿನ ತೋಪುಗಳಲ್ಲೆ ಎಂಬ ಉಲ್ಲೇಖಗಳೂ ಇವೆ. ಹಾಗಾಗಿ ಬೌದ್ಧರಲ್ಲಿ ಮಾವಿಗೆ ಪಾವಿತ್ರ್ಯವನ್ನು ಲೇಪಿಸಲಾಗಿದೆ. ಜೈನರಲ್ಲೂ ಅಷ್ಟೆ, ನೇಮಿನಾಥ ಎಂಬ ತೀರ್ಥಂಕರನಿಗೆ ಜ್ಞಾನೋದಯವಾಗಿದ್ದೆ ಮಾವಿನ ಮರದ ಕೆಳಗೆ, ಜೈನ ಯಕ್ಷಿ ತಾರಾ, ಆಮ್ರ ಮತ್ತು ಕುಸುಮಂದಿನಿಯನ್ನು ಏಕೀಭವಿಸಿ ನೋಡಲಾಗುತ್ತದೆ. ಇವರು ಮಾವನ್ನು ಫಲವಂತಿಕೆಯ ಸಂಕೇತವೆಂದು ವಿವರಿಸುತ್ತಾರೆ. ನಮ್ಮ ಜನಪದರೂ ಫಲವಂತಿಕೆಯ ಸಂಕೇತವೆಂದು, ಆಯುಷ್ಯ ಹೆಚ್ಚಿಸುವ ಹಣ್ಣೆಂದು ನೋಡುತ್ತಾರೆ.